C.R.P.67

Form No.4 (Civil)
Deposition Sheets
(R.P.No.57)

## 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
## ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಎಸ್ ಸಿ ಸಂಖ್ಯೆ: 296/2018

**ಪ್ರಾಸಾ.27 ಚಾಸಾ.39**

| | | |
|---|---|---|
| **ಸಾಕ್ಷಿದಾರರ ಹೆಸರು** | : | ರಾಮಕೃಷ್ಣ |
| **ತಂದೆ ಹೆಸರು** | : | ಆರ್. ಮರಿಯಪ್ಪ |
| **ವಯಸ್ಸು** | : | 49 ವರ್ಷಗಳು |
| **ಉದ್ಯೋಗ** | : | ಮುಖ್ಯ ಪೇದೆ, ದೊಡ್ಡಬೆಳವಂಗಲು ಪೋಲಿಸ್ ಠಾಣೆ |
| **ವಾಸ** | : | ಹೆಸರುಘಟ್ಟ. |

## ಪ್ರಮಾಣ ವಚನ ಬೋಧಿಸಿದ ದಿನಾಂಕ: 03.06.2023

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ನಾನು ದಿನಾಂಕ 15.08.2017 ರಿಂದ ದಿನಾಂಕ 15.09.2018 ರವರೆಗೆ ನಂದಗುಡಿ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿಯಲ್ಲಿ ಪೊಲೀಸ್ ಪೇದೆ ಆಗಿ ಕೆಲಸ ಮಾಡಿರುತ್ತೇನೆ.

2. ಮೊಕದ್ದಮೆ ಸಂಖ್ಯೆ 217/2017 ರಲ್ಲಿ 5 ಜನರ ಆರೋಪಿತರ ಪತ್ತೆ ಬಗ್ಗೆ ನಾನು, ನಂದಗುಡಿ ಸಬ್ ಇನ್ಸ್‌ಪೆಕ್ಟರ್ ಚಾಸಾ-43, ಚಾಸಾ-40 ಮತ್ತು ಚಾಸಾ-41 ರವರ ಜೊತೆಯಲ್ಲಿ ದಿನಾಂಕ 20.11.2017 ರಂದು ಬೆಳಗ್ಗೆ 6.00 ಗಂಟೆಗೆ ಠಾಣೆಯನ್ನು ಬಿಟ್ಟು ಚಿಕ್ಕಹರಳಗೆರೆ,

ದಳಸಗೆರೆ, ಆರೆಹಳ್ಳಿ, ನೆಲವಾಗಿಲು ಕಡೆಗಳಲ್ಲಿ ದಸ್ತು ಮಾಡಿಕೊಂಡು, ಬಾತ್ಮಿದಾರರನ್ನು ವಿಚಾರಿಸಿದೆವು. ನಂತರ ಬಾತ್ಮಿದಾರರಿಂದ ಆರೋಪಿತರ ಬಗ್ಗೆ ವಿಚಾರ ತಿಳಿದುಕೊಂಡು, ಈ ಪ್ರಕರಣಕ್ಕೆ ಸಂಬಂಧಪಟ್ಟ ಆರೋಪಿಗಳು ಹೆಚ್ ಕ್ರಾಸ್ ಬಸ್ ನಿಲ್ದಾಣದ ಬಳಿ ಇರುವುದಾಗಿ ಮಾಹಿತಿ ತಿಳಿಯಿತು. ನಂತರ ನಾವುಗಳು ಸದರಿ ಸ್ಥಳಕ್ಕೆ ಹೋದಾಗ 1 ನೇ ಆರೋಪಿ ನಾರಾಯಣಪ್ಪ, 2 ನೇ ಆರೋಪಿ ಮಧು ಮತ್ತು 3 ನೇ ಆರೋಪಿ ಕೇಶವ್ ಮೂರ್ತಿ ನಮ್ಮನ್ನು ನೋಡಿ ಓಡಲು ಪ್ರಯತ್ನಪಟ್ಟರು. ಆಗ ನಾವು ಸದರಿ ಆರೋಪಿತರನ್ನು ಸುತ್ತುವರೆದು ಹಿಡಿದುಕೊಂಡು ವಿಚಾರ ಮಾಡಿದಾಗ ಸದರಿ ಆರೋಪಿತರು ಈ ಪ್ರಕರಣದಲ್ಲಿ ನಾವೇ ನಾವು ಭಾಗಿ ಆಗಿರುತ್ತೇವೆ ಎಂದು ಒಪ್ಪಿಕೊಂಡರು. ನಂತರ ನಾವು ಸದರಿ ಆರೋಪಿತರನ್ನು ಸರ್ಕಲ್ ಇನ್ಸ್‌ಪೆಕ್ಟರ್ ಮುಂದೆ ಹಾಜರುಪಡಿಸಿದೆವು.

3. ದಿನಾಂಕ 18.12.2017 ರಂದು ಇದೇ ಪ್ರಕರಣಕ್ಕೆ ಸಂಬಂಧಪಟ್ಟ ಇನ್ನೊಬ್ಬ ಆರೋಪಿಯನ್ನು ಪತ್ತೆ ಮಾಡಲು ನೇಮಕ ಮಾಡಿದರು. ಆಗ ನಾನು, ನಂದಗುಡಿ ಸಬ್ ಇನ್ಸ್‌ಪೆಕ್ಟರ್ ಚಾಸಾ-43, ಚಾಸಾ-40 ಮತ್ತು ಚಾಸಾ-41 ರವರ ಜೊತೆಯಲ್ಲಿ ಚಿಕ್ಕಹರಳಗೆರೆ, ದಳಸಗೆರೆ, ಆರೆಹಳ್ಳಿ, ನೆಲವಾಗಿಲು ಕಡೆಗಳಲ್ಲಿ ಗಸ್ತು ಮಾಡಿಕೊಂಡು, ಬಾತ್ಮಿದಾರರನ್ನು ವಿಚಾರಿಸಿದೆವು. ನಂತರ ಬಾತ್ಮಿದಾರರಿಂದ ಆರೋಪಿ ವಿನಾಯಕನ ಬಗ್ಗೆ ವಿಚಾರ ತಿಳಿದುಕೊಂಡು, ಸದರಿ ಆರೋಪಿ ಹೆಚ್ ಕ್ರಾಸ್ ಬಸ್ ನಿಲ್ದಾಣದ ಬಳಿ ಇರುವುದಾಗಿ ಮಾಹಿತಿ ಬಂತು. ನಂತರ ನಾವುಗಳು ಸದರಿ ಸ್ಥಳಕ್ಕೆ ಹೋದಾಗ 4 ನೇ ಆರೋಪಿ ವಿನಾಯಕ ನಮ್ಮನ್ನು ನೋಡಿ ಓಡಲುಪ್ರಯತ್ನ ಪಟ್ಟ. ಆಗ ನಾವು 4 ನೇ ಆರೊಪಿಯನ್ನು ಸುತ್ತುವರೆದು ಹಿಡಿದುಕೊಂಡು ಆತನನ್ನು ಸರ್ಕಲ್ ಇನ್ಸ್ ಪೆಕ್ಟರ್ ಮುಂದೆ ಹಾಜರುಪಡಿಸಿದೆವು.

4. ದಿನಾಂಕ 07.01.2018 ರಂದು ಇದೇ ಪ್ರಕರಣಕ್ಕೆ ಸಂಬಂಧಪಟ್ಟ ಇನ್ನೊಬ್ಬ

ಆರೋಪಿಯನ್ನು ಪತ್ತೆ ಮಾಡಲು ನೇಮಕ ಮಾಡಿದರು. ಆಗ ನಾನು, ನಂದಗುಡಿ ಸಬ್ ಇನ್ಸ್‌ಪೆಕ್ಟರ್ ಚಾಸಾ-43, ಚಾಸಾ-40 ಮತ್ತು ಚಾಸಾ-41 ರವರ ಜೊತೆಯಲ್ಲಿ ಚಿಕ್ಕಹರಳಗೆರೆ, ದಳಸಗೆರೆ, ಆರೆಹಳ್ಳಿ, ನೆಲವಾಗಿಲು ಕಡೆಗಳಲ್ಲಿ ಗಸ್ತು ಮಾಡಿಕೊಂಡು, ಬಾತ್ಮಿದಾರರನ್ನು ವಿಚಾರಿಸಿದೆವು. ನಂತರ ಬಾತ್ಮಿದಾರರಿಂದ 5 ನೇ ಆರೋಪಿ ನಾರಾಯಣಸ್ವಾಮಿ ಬಗ್ಗೆ ವಿಚಾರ ತಿಳಿದುಕೊಂಡು, ಸದರಿ ಆರೋಪಿ ಕಾರೆಹಳ್ಳಿ ಗೇಟ್ ಬಳಿ ಇರುವುದಾಗಿ ಮಾಹಿತಿ ಬಂತು. ನಂತರ ನಾವುಗಳು ಸದರಿ ಸ್ಥಳಕ್ಕೆ ಹೋದಾಗ 5 ನೇ ನಾರಾಯಣಸ್ವಾಮಿ ನಮ್ಮನ್ನು ನೋಡಿ ಓಡಲುಪ್ರಯತ್ನ ಪಟ್ಟ. ಆಗ ನಾವು 5 ನೇ ಆರೋಪಿಯನ್ನು ಸುತ್ತುವರೆದು ಹಿಡಿದುಕೊಂಡು ಆತನನ್ನು ಸರ್ಕಲ್ ಇನ್ಸ್ ಪೆಕ್ಟರ್ ಮುಂದೆ ಹಾಜರುಪಡಿಸಿದೆವು.

5. 5 ಜನ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಈ ದಿವಸ ನ್ಯಾಯಾಲಯದ ಮುಂದೆ 4 ಮತ್ತು 5 ನೇ ಆರೋಪಿತರು ಇರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 4 ಮತ್ತು 5 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ದಿವಸ 1 ರಿಂದ 3 ನೇ ಆರೋಪಿಗಳು ಗೈರು ಹಾಜರಿದ್ದು, 1 ರಿಂದ 3 ನೇ ಆರೋಪಿತರ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು ಮತ್ತು 1 ರಿಂದ 3 ನೇ ಆರೋಪಿತರ ಗುರುತಿಸುವಿಕೆಗೆ ತಮ್ಮದು ಅಭ್ಯಂತರ ಇಲ್ಲವೆಂದು ಹೇಳಿರುತ್ತಾರೆ. ನಾನು ತನಿಖೆ ಸಮಯದಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಎಮ್.ಪಿ. ವಕೀಲರಿಂದ ಆರೋಪಿತರ ಪರವಾಗಿಃ**

1. ಆರೋಪಿಗಳ ಪತ್ತೆ ಬಗ್ಗೆ ಸರ್ಕಲ್ ಇನ್ಸ್‌ಪೆಕ್ಟರ್ ರವರು ನಮ್ಮ ಸಬ್ ಇನ್ಸ್‌ಪೆಕ್ಟರ್ ರವರಿಗೆ ಮೇಮೋ ನೀಡಿದ್ದರು. ಆದರೆ ನನಗೆ ಯಾವುದೇ ಆದೇಶವನ್ನು ನೀಡಿರುವುದಿಲ್ಲ. ದಿನಾಂಕ

20.11.2017 ರಂದು ಮತ್ತು 18.12.2017 ರಂದು ನಾನು ಮತ್ತು ನನ್ನ ಸಿಬ್ಬಂದಿಗಳು ಸಬ್ ಇನ್ಸ್ ಪೆಕ್ಟರ್ ಜೊತೆ ಹೆಚ್ ಕ್ರಾಸ್ ಬಸ್ ನಿಲ್ದಾಣ ಬಳಿ ಹೋಗಿರುವುದಿಲ್ಲ ಮತ್ತು ಸದರಿ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರನ್ನು ಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ 01.07.2018 ರಂದು ನಾನು ಮತ್ತು ನನ್ನ ಸಿಬ್ಬಂದಿಗಳು ಸಬ್ ಇನ್ಸ್ ಪೆಕ್ಟರ್ ಜೊತೆ ಕಾರೆಹಳ್ಳಿ ಬಳಿ ಹೋಗಿರುವುದಿಲ್ಲ ಮತ್ತು ಸದರಿ ಸ್ಥಳದಲ್ಲಿ 5 ನೇ ಆರೋಪಿಯನ್ನು ಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರವರ ಮುಂದೆ ದಿನಾಂಕ 26.12.2018 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನಾನು ಸದರಿ ಹೇಳಿಕೆಯನ್ನು ತನಿಖಾಧಿಕಾರಿಗಳ ಜೊತೆ ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು 1 ರಿಂದ 5 ನೇ ಆರೋಪಿತರನ್ನು ಹೆಚ್ ಕ್ರಾಸ್ ಬಸ್ ನಿಲ್ದಾಣದ ಬಳಿ ಮತ್ತು ಕಾರೆಹಳ್ಳಿ ಗೇಟ್ ಬಳಿ ಬಂಧಿಸಿರುವುದಿಲ್ಲ, ಸದರಿ ಆರೋಪಿತರನ್ನು ಅವರ ಮನೆಯಿಂದ ಬಂಧಿಸಿ ಅವುರುಗಳನ್ನು ಸರ್ಕಲ್ ಇನ್ಸ್ ಪೆಕ್ಟರ್ ಮುಂದೆ ಹಾಜರುಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.